## ಕೃಷಿ ತಂತ್ರಜ್ಞಾನ ಸಪ್ತಾಹ ಆದರಣೆ



ಡಿ. 28.12.2016 ರಂದು ನಮ್ಮ ಕೇಂದ್ರ ಹಾಗೂ ಕೃಷಿ ಮಹಾವಿದ್ಯಾಲಯ ಸಹಯೋಗದೊಂದಿಗೆ ಕೃಷಿ ತಂತ್ರಜ್ಞಾನ ಸಪ್ತಾಹ ಅಚರಿಸಲಾಯಿತು. ಈ ಸಂದರ್ಭದಲ್ಲಿ ಆಹಾರ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಕುರಿತು ಉಪನ್ಯಾಸಗಳನ್ನು ನೀಡಲಾಯಿತು. ಡಾ. ಸರೋಜನಿ ಜೆ ಕರಕಣ್ಣವರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ಆಹಾರ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಹಾಗೂ ಆದಾಯ ಹೆಚ್ಚಿಸುವ ಮಹತ್ವ ತಿಳಿಸಿದರು. ಡಾ. ಯಶಸ್ವಿನಿ ಶರ್ಮಾರವರು ಮಾವಿನ ಮೌಲ್ಯವರ್ಧನೆ ಕುರಿತಂತೆ ಮಾಹಿತಿ ನೀಡಿದರು. ಶ್ರೀಮತಿ ಗೀತಾ ಎಸ್. ತಾಮಗಳೆಯವರು ಸಪ್ತಾಹದ ವಿಶೇಷತೆ ಹಾಗೂ ಕಿರುಧಾನ್ಯಗಳ ಮಹತ್ವ ಕುರಿತು ವಿವರಿಸಿ ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು.



ದಿನಾಂಕ 29.12.2017 ರಂದು ಕೇಂದ್ರ ಹಾಗೂ ವನಸಿರಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ರಾಣೇಬೆನ್ನೂರ ಸಹಯೋಗದಲ್ಲಿ ಸಾವಯುವ ಕೃಷಿ ಕುರಿತು ಮಾಹಿತಿ ಕಾರ್ಯಕ್ರಮವನ್ನು ಕೃಷಿ ತಂತ್ರಜ್ಞಾನ ಸಪ್ತಾಹದ ಅಡಿಯಲ್ಲಿ ಆದರಿಸಲಾಯಿತು. ಕೃಷಿ ಪಂಡಿತ ಪ್ರಶಸ್ತಿ ವಿಜೇತರಾದ ಶ್ರೀ ಚನ್ನಬಸಪ್ಪ ಕೋಂಬಳಿ ಕಾರ್ಯಕ್ರಮ ಉದ್ಘಾಟಿಸಿ, ಸಾವಯುವ ಕೃಷಿ ಹಾಗೂ ಮಣ್ಣು, ನೀರು ಸಂರಕ್ಷಣೆ ಕುರಿತಂತೆ ತಮ್ಮ ಅನುಭವಗಳನ್ನು ಹಂಚಿಕೊಂಡರು. ಶ್ರೀ ಡಿ.ಎಸ್.ಎಮ್.ಗೌಡ ರವರು ಮಣ್ಣು ಹಾಗೂ ನೀರಿನ ಸಂರಕ್ಷಣೆ ಕುರಿತಂತೆ ತಾಂತ್ರಿಕ ಮಾಹಿತಿ ನೀಡಿದರು. ಡಾ. ಎಸ್.ಎ.ಅಷ್ಟಪುತ್ರೆ, ಶ್ರೀಮತಿ ಗೀತಾ ಎಸ್. ತಾಮಗಳೆ ಹಾಗೂ ಡಾ. ಯಶಸ್ವಿನಿ ಶರ್ಮಾರವರು ಭಾಗವಹಿಸಿ ರೈತರಿಗೆ ಕೇಂದ್ರದಿಂದ ಲಭ್ಯವಿರುವ ಮಾಹಿತಿಗಳು ಹಾಗೂ ತಂತ್ರಜ್ಞಾನಗಳ ಕುರಿತು ಸವಿವರವಾಗಿ ಉಪನ್ಯಾಸವನ್ನು ನೀಡಿದರು. ಡಾ. ಸರೋಜಿನಿ ಕರಕಣ್ಣವರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕೃಷಿ ತಂತ್ರಜ್ಞಾನ ಸಪ್ತಾಹದ ಕುರಿತು ಮಹತ್ವ ರೈತರಿಗೆ ಅರಿವು ಮೂಡಿಸಿದರು. ಕೃಷಿ ಮಾರುಕಟ್ಟೆ ಹಾಗೂ ಸಾವಯುವ ಕೃಷಿ ವಿಷಯುಗಳನ್ನು ಕೂಡ ವಿವರಿಸಲಾಯಿತು.

## ಕೃಷಿ ಭಾಗ್ಯ ಯೋಜನೆಯ ಸಮಿಕ್ಷೆ



ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ವಿಜ್ಞಾನಿಗಳು ಜಿಲ್ಲೆಯ ಕೃಷಿ ಭಾಗ್ಯ ಯೋಜನೆಯ ಫಲಾನುಭವಿಗಳ ಕಾರ್ಯಕ್ಷೇತ್ರಗಳಿಗೆ ಭೇಟಿ ನೀಡಿ ಯೋಜನೆಯ ಸದುಪಯೋಗದ ಕುರಿತು ಮಾಹಿತಿ ಸಂಗ್ರಹಣೆ ಮಾಡಿದರು.




**ಪ್ರಕಾಶಕರು**
**ಡಾ. ಸರೋಜನಿ ಜೆ ಕರಕಣ್ಣವರ**
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ಸಂಪಾದಕರು : ಡಾ. ಅಶೋಕ ಪಿ.,
ಸಹ ಸಂಪಾದಕರು : ಶ್ರೀಮತಿ ಗೀತಾ ತಾಮಗಳೆ, ಡಾ. ಎಸ್. ಎ. ಅಷ್ಟಪುತ್ರೆ
ಡಾ. ಯಶ್ವಸ್ವಿನಿ ಶರ್ಮಾ, ಶ್ರೀ. ಡಿ.ಎಸ್.ಎಂ.ಗೌಡ
ನೆರವು : ಡಾ. ನೀಲಕಾಂತ್ ಜೆ. ಕೆ.
ವಿನ್ಯಾಸ : ಕು. ರೇಖಾ ಕೆ. ಎನ್.
ಅಕ್ಷರ ಜೋಡಣೆ : ಶ್ರೀ ಶಬ್ಬೀರ್


**ಆಂತರಿಕ ಪ್ರಸಾರಕ್ಕಾಗಿ ಮಾತ್ರ**

ಮುದ್ರಿತ ವಿಷಯ

ಗೆ,

ಪಿನ್ ಕೋಡ್


ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ॥ ರಾಣೇಬೆನ್ನೂರು, ಜಿ॥ ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)





ಕೃಷಿ ವಿಶ್ವವಿದ್ಯಾಲಯ, ಧಾರವಾಡ


# ವಾರ್ತಾ ಪತ್ರಿಕೆ


ಐ.ಸಿ.ಎ.ಆರ್.ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ
Website: www. kvkhaveri.org
Email:kvk_haveri@rediffmail.com
ಅಕ್ಟೋಬರ್– ಡಿಸೆಂಬರ್ 2016 ಸಂಪುಟ–15 ಸಂಚಿಕೆ–4


## ‘ಗುಳಿ ರಾಗಿ ಪದ್ಧತಿ’ ರಾಷ್ಟ್ರೀಯ ಕಾರ್ಯಾಗಾರ





ನಮ್ಮ ಕೇಂದ್ರದಲ್ಲಿ ‘ಗುಳಿರಾಗಿ' ಪದ್ಧತಿ ಕುರಿತ ಎರಡು ದಿನಗಳ (ಅಕ್ಟೋಬರ್ 5 ಮತ್ತು 6) ರಂದು ರಾಷ್ಟ್ರೀಯ ಕಾರ್ಯಾಗಾರವುನ್ನು ಹಮ್ಮಿಕೊಳ್ಳಲಾಗಿತ್ತು. ಡಾ. ವಿ.ಐ. ಬೆಣಗಿ, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಹವಾಮಾನ ವೈಪರೀತ್ಯದ ಬಿಕ್ಕಟ್ಟನ್ನು ಸಿರಿಧಾನ್ಯ ಕೃಷಿಯಿಂದ ಎದುರಿಸಲು ಸಾಧ್ಯವಿದ್ದು, ಆರೋಗ್ಯ ಹಾಗೂ ಪರಿಸರಕ್ಕೆ ಸಿರಿಧಾನ್ಯ ಪೂರಕ ಎಂದರು. ಈ ಕಾರ್ಯಕ್ರಮದಲ್ಲಿ ಸಹಜ ಸಮೃದ್ಧ ಬಳಗದ ನಿರ್ದೇಶಕ ಜಿ.ಕೃಷ್ಣಪ್ರಸಾದ್, ಡಾ. ಆರ್.ಎ. ಬಾಳಿಕಾಯಿ, ಬೀಜ ಸ್ವರಾಜ್ ಮಂಚ್ ಸಂಘಟಕ ಜೇಕಬ್ ನೆಲ್ಲಿತನಮ್, ಪ್ರಾಧ್ಯಾಪಕರಾದ ಡಾ. ಸಿ. ಶಾಂತಕುಮಾರ್, ಕೇಂದ್ರದ ಹಿರಿಯ ವಿಜ್ಞಾನಿ ಡಾ. ಸರೋಜನಿ ಕರಕಣ್ಣವರ ಹಾಗೂ ವಿಜ್ಞಾನಿಗಳು ಉಪಸ್ಥಿತರಿದ್ದರು. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಛತ್ತೀಸಗಢ ರಾಜ್ಯಗಳ ಸುಮಾರು 70 ರೈತರು ಈ ಕಾರ್ಯಾಗಾರದಲ್ಲಿ ಪಾಲ್ಗೊಂಡು ತಮ್ಮ ಗುಳಿ ರಾಗಿ ಪದ್ಧತಿ ಕುರಿತ ವಿಚಾರಗಳನ್ನು ವಿನಿಮಯ ಮಾಡಿಕೊಂಡರು. ಹೆಚ್ಚು ಇಳುವರಿ ನೀಡುವ ಸಾಂಪ್ರದಾಯಿಕ ಕೃಷಿ ಪದ್ಧತಿಯಾದ ಗುಳಿ ರಾಗಿ ವಿಧಾನವು ಹಾವೇರಿ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಈ ವಿಧಾನದ ಮೇಲೆ ವೈಜ್ಞಾನಿಕ ಬೆಳಕು ಬೀರುವ ಉದ್ದೇಶದಿಂದ ಸಹಜ ಸಮೃದ್ಧ ಬಳಗ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಈ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಚಿನ್ನಿಕಟ್ಟಿ ಗ್ರಾಮದ ಶ್ರೀ ಶ್ರೇಣಿಕರಾಜ ಇವರ ಹೊಲದಲ್ಲಿ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಯಿತು.

## ತೊಗರಿಯಲ್ಲಿ ಕುಡಿ ಚಿವುಟಿಕೆಯ ಪ್ರಾತ್ಯಕ್ಷತೆ



ಹಿರೇಕೆರೂರು ತಾಲ್ಲೂಕಿನ ರಟ್ಟಿಹಳ್ಳಿ ಗ್ರಾಮದ ಪ್ರಗತಿಪರ ರೈತರಾದ ಶ್ರೀ ವಿರುಪಾಕ್ಷಪ್ಪ ಬೆನ್ನೂರ ಇವರ ಕ್ಷೇತ್ರದಲ್ಲಿ ತೊಗರಿಯಲ್ಲಿ ಕುಡಿ ಚಿವುಟಿಕೆಯ ಪ್ರಾತ್ಯಕ್ಷತೆ ಹಮ್ಮಿಕೊಳ್ಳಲಾಗಿತ್ತು. ಇವರು 35 ಎಕರೆ ಹೊಲದಲ್ಲಿ ತೊಗರಿಯ ತಳಿಯಾದ ಬಿ.ಎಸ್.ಎಂ.ಆರ್.– 736 ರನ್ನು ಬೇಸಾಯ ಶಾಸ್ತ್ರದ ವಿಜ್ಞಾನಿಯಾದ ಡಾ.ಅಶೋಕ, ಪಿ. ಇವರ ಮಾರ್ಗದರ್ಶನದಲ್ಲಿ ಬೆಳೆಯಲಾಗಿತ್ತು. ಕೇಂದ್ರದ ಮುಖ್ಯಸ್ಥರಾದ ಡಾ. ಸರೋಜನಿ ಕರಕಣ್ಣನವರ ಇವರು ದ್ವಿದಳ ದಾನ್ಯಗಳನ್ನು ಹೆಚ್ಚಿನ ಪ್ರದೇಶದಲ್ಲಿ ಬೆಳೆಯಬೇಕು ಹಾಗೂ ಮಣ್ಣಿನ ಗುಣಧರ್ಮ ಕಾಪಾಡುವಂತೆ ತಿಳಿಸಿದರು.

## ರೈತರ ಆದಾಯ ದ್ವಿಗುಣಗೊಳಿಸುವ ಪೂರ್ವಭಾವಿ ಸಭೆ



ಕೇಂದ್ರದ ಆವರಣದಲ್ಲಿ 'ರೈತರ ಆದಾಯ ದ್ವಿಗುಣಗೊಳಿಸುವ ಯೋಜನೆಯ' ಪೂರ್ವಭಾವಿ ಸಭೆಯನ್ನು ದಿನಾಂಕ: 24.11.2016 ರಂದು ನಡೆಸಲಾಯಿತು. ಕೃಷಿ ಬೆಲೆ ಆಯೋಗ ಸಮಿತಿ ಅಧ್ಯಕ್ಷರಾದ ಡಾ.ಪ್ರಕಾಶ ಕಮ್ಮರಡಿ ಇವರು ರೈತರಿಗೆ ಅವಶ್ಯವಿರುವ ತಾಂತ್ರಿಕತೆಗಳನ್ನು ತಿಳಿಸಿದರು. ಸಭೆಯಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹವಿಸ್ತರಣಾ ನಿರ್ದೇಶಕರು ಹಾಗೂ ಆವರಣದ ವಿಜ್ಞಾನಿಗಳು ಹಾಜರಿದ್ದು, ಈ ಯೋಜನೆಯ ಕುರಿತು ಮಾಹಿತಿ ವಿನಿಮಯ ನಡೆಸಿದರು.

## ವಿಶ್ವ ಆಹಾರ ದಿನಾಚರಣೆ



ಹಿರೇಕೆರೂರ ತಾಲೂಕಿನ ಹಿರೇಮೊರಬ ಗ್ರಾಮದಲ್ಲಿ ದಿನಾಂಕ: 19.10.2016 ರಂದು ಆರೋಗ್ಯ ಇಲಾಖೆಯ ಸಹಯೋಗದಲ್ಲಿ ವಿಶ್ವ ಆಹಾರ ದಿನಾಚರಣೆಯುನ್ನು ಆಚರಿಸಲಾಯಿತು. ಕೇಂದ್ರದ ಮುಖ್ಯಸ್ಥರಾದ ಡಾ. ಸರೋಜನಿ ಕರಕಣ್ಣನವರು ಆಹಾರ ಮತ್ತು ಪೋಷಣೆಯ ಮಹತ್ವದ ಮಾಹಿತಿ ನೀಡಿದರು. ಕೇಂದ್ರದ ಗೃಹ ವಿಜ್ಞಾನಿಯಾದ ಶ್ರೀಮತಿ ಗೀತಾ ತಾಮಗಳೆ ರವರು ಸಿರಿಧಾನ್ಯಗಳ ಮಹತ್ವ ಹಾಗೂ ಮೌಲ್ಯವರ್ಧಿತ ಪದಾರ್ಥಗಳ ತಯಾರಿಕೆ ಕುರಿತು ಪ್ರಾತ್ಯಕ್ಷಿಕೆ ನೀಡಿದರು. ಕಾರ್ಯಕ್ರಮದಲ್ಲಿ ಸುಮಾರು 150 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿ ಮಾಹಿತಿ ಪಡೆದರು.



## 'ಸ್ವಚ್ಛತಾ ಅಂದೋಲನ' ಪಾಕ್ಷಿಕದಡಿ ಜಾಥಾ ಹಾಗೂ ಆವರಣ ಸ್ವಚ್ಛತಾ ಕಾರ್ಯಕ್ರಮ



ದಿ. 26.10.2016 ರಂದು ನಮ್ಮ ಆವರಣದಲ್ಲಿ ಸ್ವಚ್ಛತಾ ಪಾಕ್ಷಿಕ ಅಂದೋಲನ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಡಾ. ಅರ್.ಎ.ಬಾಳೀಕಾಯಿ, ಕೃಷಿ ವಿದ್ಯಾಧಿಕಾರಿಗಳು ಸ್ವಚ್ಛತಾ ಮಹತ್ವ ಬಗ್ಗೆ ವಿದ್ಯಾರ್ಥಿಗಳಿಗೆ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರಿಗೆ ತಿಳಿ ಹೇಳಿದರು. ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣನವರ ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ಪಾಕ್ಷಿಕದಡಿ ಕೇಂದ್ರದಿಂದ 16.10.2016 ರಂದು ವಿದ್ಯಾರ್ಥಿ ಹಾಗೂ ಸಿಬ್ಬಂದಿಯಿಂದ ಸ್ವಚ್ಛತಾ ಶಪಥ ಮಾಡಿಸಿದರು. ಈ ಪಾಕ್ಷಿಕದಲ್ಲಿ ಎರೆಗೊಬ್ಬರ, ಕಾಂಪೋಸ್ಟ್ ಪದ್ಧತಿ ಪ್ರಾತ್ಯಕ್ಷಿಕೆ, ವಿದ್ಯಾರ್ಥಿಗಳಿಂದ ಸ್ವಚ್ಛತಾ ಸ್ಲೋಗನ್ ಬರೆಯುವುದು, ಆವರಣ ಸ್ವಚ್ಛತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಕೇಂದ್ರದ ಸಿಬ್ಬಂದಿ ಹಾಗೂ ಡಾ. ಸಿ.ಪಿ.ಮನ್ಸೂರ ಪ್ರಾಧ್ಯಾಪಕರು, ರಾಷ್ಟ್ರೀಯ ಸ್ವಯಂ ಸೇವಾ ಸಂಘ, ಅಧಿಕಾರಿ ಡಾ. ವೀರಣ್ಣ ಹಾಗೂ ಡಿಪ್ಲೋಮಾ, ಬಿ.ಎಸ್ಸಿ (ಕೃಷಿ)ಯ ಸುಮಾರು 70 ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯವರು ಈ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು.

## ಜೇನು ಸಾಕಾಣಿಕೆ ತರಬೇತಿ ಕಾರ್ಯಕ್ರಮ





ದಿನಾಂಕ: 30.11.2016 ಮತ್ತು 01.12.2016 ರಂದು 2 ದಿನಗಳ ಜೇನು ಸಾಕಾಣಿಕೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಡಾ. ಆರ್. ಎ. ಬಾಳಿಕಾಯಿ, ಡೀನ್ (ಡೀನ್) ಇವರು ಜೇನು ಕೃಷಿ ಒಂದು ಆದಾಯ ತರುವ ಚಟುವಟಿಕೆಯಾಗಿದ್ದು, ಪರಾಗಸ್ಪರ್ಶದಿಂದ ಬೆಳೆಯ ಇಳುವರಿ ಹೆಚ್ಚಾಗುವುದೆಂದು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಹೇಮಣ್ಣ ಭಾರಂಗಿ, ಪ್ರಗತಿಪರ ರೈತರು, ಹಿರೇಅಣಜಿ, ಹಾವೇರಿ ಇವರು ಜೇನು ಸಾಕಾಣಿಕೆಯ ತಮ್ಮ ಅನುಭವ ಹಂಚಿಕೊಂಡರು. ಕೇಂದ್ರದ ವಿಜ್ಞಾನಿಯಾದ ಡಾ. ಯಶಸ್ವಿನಿ ಶರ್ಮಾರವರು ಕಾರ್ಯಕ್ರಮವನ್ನು ಆಯೋಜಿಸಿ ರೈತರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಸರೋಜನಿ ಜೆ. ಕರಕಣ್ಣವರ, ಮುಖ್ಯಸ್ಥರು ಕಾರ್ಯಕ್ರಮದ ವಿವರ ನೀಡಿ ರೈತರು ಜೇನು ಕೃಷಿ ತರಬೇತಿ ಪಡೆದು ಅನುಷ್ಠಾನಗೊಳಿಸಿ ಆದಾಯ ಹೆಚ್ಚಿಸಿಕೊಳ್ಳಬೇಕೆಂದು ತಿಳಿಸಿದರು. ಡಾ. ಆರ್. ವೀರಣ್ಣ, ಕೀಟಶಾಸ್ತ್ರಜ್ಞರು, ಇವರು ಜೇನು ಕೃಷಿ ಬಗ್ಗೆ ತಾಂತ್ರಿಕ ಮಾಹಿತಿ ನೀಡಿದರು. ಶ್ರೀ. ಧರ್ಮೇಂದ್ರ ಹೆಗಡೆ, ಜೇನು ಸಾಕಾಣಿಕೆ ಪರಿಣಿತರು, ಶಿರಸಿ, ಸಂಪ್ನೂಲ ವ್ಯಕ್ತಿಯಾಗಿ ರೈತರಿಗೆ ಜೇನು ಕೃಷಿಯ ಬಗ್ಗೆ ಸವಿವರವಾಗಿ ಕ್ಷೇತ್ರ ಭೇಟಿಯಲ್ಲಿ ಪ್ರಯೋಗಿಕ ಮಾಹಿತಿ ನೀಡಿದರು.

## ಬರದಲ್ಲಿ ತೆನೆಯತ್ತಿದ ನವಣೆಯ ತಳಿ ಡಿ.ಹೆಚ್.ಎಫ್.ಟಿ–109–3ರ ಕ್ಷೇತ್ರೋತ್ಸವ



ಪ್ರಗತಿಪರ ರೈತರಾದ ಶ್ರೀ ಹೊನ್ನಪ್ಪ ದುರಗಪ್ಪ ಕೋರಚರ್, ಸಾ|| ಬಸಾಪುರ, ಹಾವೇರಿ ತಾಲ್ಲೂಕು ಇವರ ಕ್ಷೇತ್ರದಲ್ಲಿ ಬೆಳೆದ ನವಣೆ ಬೆಳೆ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಡಾ. ಅಶೋಕ ಪಿ. ರವರು ಹೊಸ ತಳಿ ಡಿ.ಹೆಚ್.ಎಫ್.ಟಿ –109–3 ರ ಇಳುವರಿ ಹೆಚ್ಚಿಸುವ ಬೇಸಾಯ ಕ್ರಮಗಳನ್ನು ರೈತರಿಗೆ ಮನದಟ್ಟು ಮಾಡಿದರು. ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ಕರಿಯಲ್ಲಪ್ಪರವರು ಈ ಸಂದರ್ಭದಲ್ಲಿ ಹಾವೇರಿ ತಾಲೂಕಿನಲ್ಲಿ ಮಳೆ ಪ್ರಮಾಣ ಕಡಿಮೆಯಿದ್ದು ತೇವಾಂಶ ಕೊರತೆಯಲ್ಲೂ ಹೆಚ್ಚಿನ ಇಳುವರಿ ಬರುವಂತಹ ಕಿರುಧಾನ್ಯಗಳನ್ನು ಬೆಳೆಯಬೇಕೆಂದು ರೈತರಿಗೆ ಕರೆ ನೀಡಿದರು. ಡಾ. ಅಷ್ಟಪುತ್ರೆ, ನವಣೆ ಬೆಳೆಗೆ ಅತಿ ಕಡಿಮೆ ರೋಗ ಮತ್ತು ಕೀಟ ಬಾದೆಯಿದ್ದು ಹೆಚ್ಚಿನ ಇಳುವರಿಯನ್ನು ಪಡೆಯಬಹುದೆಂದು ಎಂದರು. ಶ್ರೀಮತಿ ಗೀತಾ ತಾಮಗಳೆಯವರು ಇತ್ತೀಚಿನ ದಿನಗಳಲ್ಲಿ ನವಣೆಯನ್ನು ಆಹಾರವಾಗಿ ಬಳಸುವವರ ಸಂಖ್ಯೆ ಹೆಚ್ಚುತ್ತಿದ್ದು ನವಣೆಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಬರುತ್ತಿದೆ ಎಂದರು. ಈ ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು





## ವಿಶ್ವ ಮಣ್ಣು ಆರೋಗ್ಯ ದಿನಾಚರಣೆ–2016





ದಿನಾಂಕ: 05.12.2016 ರಂದು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಹಾಗೂ ಕೃಷಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ "ವಿಶ್ವ ಮಣ್ಣು ಆರೋಗ್ಯ ದಿನಾಚರಣೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ಕೊಟ್ರೇಶಪ್ಪ ಬಸೇಗಣ್ಣಿ ಅಧ್ಯಕ್ಷರು ಜಿಲ್ಲಾ ಪಂಚಾಂತ್ ಇವರು ಮಾತನಾಡಿ ಮಣ್ಣು ಪರೀಕ್ಷೆ ಮಹತ್ವ ಬಗ್ಗೆ ತಿಳಿಸಿದರು. ಶ್ರೀ ರಾಜಶೇಖರ ಬಿಜಾಪೂರ, ಜಂಟಿ ಕೃಷಿ ನಿರ್ದೇಶಕರು ಮಾತನಾಡಿ "ಮಣ್ಣು ಆರೋಗ್ಯ ಚೀಟಿ"ಯನ್ನು ನೀಡುವ ಯೋಜನೆಯ ವಿವರಗಳನ್ನು ತಿಳಿಸಿದರು. ಮುಖ್ಯಅತಿತಿಗಳಾಗಿ ಜಿಲ್ಲಾಧಿಕಾರಿ ಡಾ. ವೆಂಕಟೇಶ ಎಂ.ವಿ. ಇವರು ಮಣ್ಣಿನ ಆರೋಗ್ಯ ಕಾಪಾಡಿದರೆ ಸುಸ್ಥಿರ ಅಭಿವೃದ್ಧಿ ಹಾಗೂ ಉತ್ತಮ ಆದಾಯ ಪಡೆಯಲು ಸಾಧ್ಯ' ಎಂದರು. ಬಸವರಾಜ ಶಿವಣ್ಣನವರ್, ಶಾಸಕರು ಮಾತನಾಡಿ ಮಣ್ಣಿನ ಆರೋಗ್ಯ ಕಾಪಾಡುವಲ್ಲಿ ರೈತರ ಪಾತ್ರದ ಬಗ್ಗೆ ಮನದಟ್ಟು ಮಾಡಿದರು. ಕೆ.ಬಿ. ಆಂಜನಪ್ಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಾತನಾಡಿ ರೈತರು ಆದಾಯದ ಜೊತೆ ಆರೋಗ್ಯವನ್ನೂ ಗಮನಿಸಬೇಕು ಅಲ್ಲದೇ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು. ಕೊನೆಯಲ್ಲಿ ವಂದನಾರ್ಪಣೆಯನ್ನು ಕೇಂದ್ರದ ಮುಖ್ಯಸ್ಥರಾದ ಡಾ. ಸರೋಜನಿ. ಜೆ. ಕರಕಣ್ಣವರ ಸಲ್ಲಿಸಿದರು.

## ತೊಗರಿ ಬೆಳೆ ಕ್ಷೇತ್ರೋತ್ಸವ



ನಾಟಿ ಪದ್ಧತಿಯಲ್ಲಿ ಬೆಳೆದ ತೊಗರಿ (ಬಿ.ಎಸ್.ಎಮ್.ಆರ್–736) ಬೆಳೆಯ ಕ್ಷೇತ್ರೋತ್ಸವವನ್ನು ದಿ:10.12.2016ರಂದು ಹಿರೇಕೆರೂರ ತಾಲೂಕ ರಟ್ಟಿಹಳ್ಳಿ ಗ್ರಾಮದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ಕೇಂದ್ರ ಹಾಗೂ ಕೃಷಿ ಇಲಾಖೆ ಇವರ ಸಹಯೋಗದೊಂದಿಗೆ ಪ್ರಗತಿ ಪರ ರೈತ ಶ್ರೀ ವೀರಪ್ಪ ಬೆನ್ನೂರ ಇವರ ಜಮೀನಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಡಾ. ಅಶೋಕ.ಪಿ ರವರು ತೊಗರಿ ಬೆಳೆ ಕ್ಷೇತ್ರೋತ್ಸವದ ಬಗ್ಗೆ ವಿವರಿಸಿದರು. ಯು.ಬಿ.ಬಣಕಾರ, ಶಾಸಕರು ಕ್ಷೇತ್ರೋತ್ಸವವನ್ನು ಉದ್ಘಾಟಿಸಿ, ವೈಜ್ಞಾನಿಕ ಹಾಗೂ ಹೊಸ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ಹೆಚ್ಚಿನ ಇಳುವರಿಯನ್ನು ಪಡೆಯಲು ತಿಳಿಸಿದರು. ಡಾ. ವಿ.ಆಯ್.ಬೆಣಗಿ, ಇವರು ಅಧ್ಯಕ್ಷತೆ ವಹಿಸಿ ಮಾತನಾಡಿ ತೊಗರಿ ಬೆಳೆಗೆ ಹೆಚ್ಚು ಮಳೆ ಬೇಕಾಗಿಲ್ಲ. ಬರದ ನಾಡಿನಲ್ಲಿಯೂ ಉತ್ತಮವಾದ ಬೆಳೆಬಹುದು ಎಂದರು. ಪ್ರಗತಿಪರ ರೈತ, ಶ್ರೀ ವೀರಪ್ಪ ಬೆನ್ನೂರ ಮಾತನಾಡಿ ಕೃಷಿ ವಿಜ್ಞಾನಿಗಳು ಹೇಳಿದಂತಹ ತಾಂತ್ರಿಕತೆಯನ್ನು 25 ಗ್ಕರೆ ಜಮೀನಿನಲ್ಲಿ ತೊಗರಿ ಬೆಳೆದು ಉತ್ತಮವಾಗಿ ಬೆಳೆ ಬಂದಿದೆ' ಎಂದು ನುಡಿದರು. ಕಾರ್ಯಕ್ರಮದಲ್ಲಿ ಜಿ.ಪಂ. ಸದಸ್ಯೆ ಸುಮಿತ್ರಾ ಪಾಟೀಲ, ತಾ.ಪಂ.ಸದಸ್ಯೆ ಮಹಬೂಬ್‌ಸಾಬ ಮುಲ್ಲಾ, ಭರಮಪ್ಪ ಎಲದಹಳ್ಳಿ, ಸಹಾಯಕ ಕೃಷಿ ನಿರ್ದೇಶಕ ಜಿ.ಎಂ.ಹಲಗಿ ಉಪಸ್ಥಿತರಿದ್ದರು. ಕೃಷಿ ನಿರ್ದೇಶಕ ಶಿವಕುಮಾರ ಮಲ್ಲಾಡದ ಸ್ವಾಗತಿಸಿದರು ಡಾ. ಯಶಸ್ವಿನಿ ಶರ್ಮ ನಿರೂಪಿಸಿ, ಡಾ. ಸರೋಜಿನಿ ಕರಕಣ್ಣನವರ ವಂದಿಸಿದರು.

## ಜೈ ಕಿಸಾನ್ ಜೈ ವಿಜ್ಞಾನ ಸಪ್ತಾಹ ಆಚರಣೆ





ದಿನಾಂಕ: 23/12/2016 ರಿಂದ 29/12.2016 ರವರೆಗೆ 'ಜೈ ಕಿಸಾನ್ ಜೈ ವಿಜ್ಞಾನ ಸಪ್ತಾಹದ', ರಾಷ್ಟ್ರೀಯ ಕೃಷಿಕರ ದಿನಾಚರಣೆ ಮತ್ತು ಕೃಷಿ ತಂತ್ರಜ್ಞಾನ ಸಪ್ತಾಹದ ಆಚರಣೆಯನ್ನು ಆಚರಿಸಲಾಯಿತು. ಪ್ರಗತಿಪರ ರೈತರಾದ ಶ್ರೀ ಪಿ.ವಿ.ಕೆರೂಡಿಯವರು ಉದ್ಘಾಟಕರಾಗಿ,ಕೃಷಿ ವಿಜ್ಞಾನ ಕೇಂದ್ರದ ಕೃಷಿ ತಾಂತ್ರಿಕತೆಗಳನ್ನು ರೈತರು ಬೆಳೆಗಳಲ್ಲಿ ಅಳವಡಿಸಿ ಇಳುವರಿ ಹೆಚ್ಚಿಸಿಕೊಳ್ಳಬೇಕೆಂದು ಕರೆಯಿತ್ತರು. ಪ್ರಾಸ್ತಾವಿಕವಾಗಿ ಡಾ. ಅಶೋಕ ಪಿ. ಮಾತನಾಡಿ, ಪ್ರತಿ ವರ್ಷ ಡಿಸೆಂಬರ್ 23 ರಂದು, "ರಾಷ್ಟ್ರೀಯ ಕೃಷಿಕರ ದಿನಾಚರಣೆ" ಎಂಬುದಾಗಿ, ಭಾರತದ ದೇಶದ 6ನೇ ಪ್ರಧಾನ ಮಂತ್ರಿ ಶ್ರೀ ಚೌಧುರಿ ಚರಣ್ ಸಿಂಗ್ ರ ಜನ್ಮ ದಿನವನ್ನು ನಮ್ಮ ದೇಶದಲ್ಲಿ "ರೈತ ದಿನಾಚರಣೆಯನ್ನಾಗಿ" ಆಚರಿಸಿಕೊಂಡು ಬರಲಾಗುತ್ತಿದೆ. ರೈತರಿಗೆ ಮಣ್ಣಿನ ಫಲವತ್ತತೆ ನಿರ್ವಹಣೆ, ತೋಟಗಾರಿಕಾ ಬೆಳೆಗಳಲ್ಲಿ ಆದಾಯ ಹೆಚ್ಚಿಸುವ ಕ್ರಮಗಳು, ಸಸ್ಯರೋಗಗಳ ಸಮಗ್ರ ನಿರ್ವಹಣೆ, ತೃಣ ಧಾನ್ಯಗಳ ಕೃಷಿ ಹಾಗೂ ಮೌಲ್ಯವರ್ಧನೆಯ ಮಾಹಿತಿಯನ್ನು ಕೇಂದ್ರದ ವಿಜ್ಞಾನಿಗಳು ನೀಡಿದರು.